**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 2086/2022**

ಚಾ.ಸಾ–12, ಪ್ರಾ.ಸಾ–1

| | | |
|---|---|---|
| ಹೆಸರು | : | ವಿ.ಎಸ್. ಸಿದ್ದರಾಜು |
| ತಂದೆಯ ಹೆಸರು | : | ಲೇಟ್ ಸಿದ್ದಯ್ಯ |
| ವಯಸ್ಸು | : | 58 |
| ವೃತ್ತಿ | : | ಪೊಲೀಸ್ ಉಪ ನಿರೀಕ್ಷಕರು, ಬನ್ನೂರು ಪೊ.ಠಾಣೆ. |
| ವಾಸ | : | ಮೈಸೂರು |

**ದಿನಾಂಕಃ 08.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಜನವರಿ 2013 ರಿಂದ ನವೆಂಬರ್ 2017 ರವರೆಗೆ ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 15.09.2014 ರಂದು ನಾನು ಠಾಣಾಧಿಕಾರಿಯಾಗಿದ್ದಾಗ ರಾತ್ರಿ 10.45 ಗಂಟೆಗೆ ಚಾಸಾ–1 ರವರು ನೀಡಿದ್ದ ದೂರು ಮತ್ತು ಪಂಚನಾಮವನ್ನು ಸ್ವೀಕರಿಸಿ ಪ್ರಥಮ ವರ್ತಮಾನ ವರದಿಯನ್ನು ಅಪರಾಧ ಸಂಖ್ಯೆ 256/2014 ರಲ್ಲಿ ದಾಖಲಿಸಿರುತ್ತೇನೆ.

ಆ ಎರಡೂ ದಾಖಲೆಗಳ ದೃಡೀಕೃತ ಪ್ರತಿಗಳನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು 2 ಎಂದು ಗುರುತಿಸಲಾಯಿತು.

ಸಿಸಿ ಸಂಖ್ಯೆ: 2086/2022

ಜಪ್ತಿಪಡಿಸಿದ ಮೂರು ಲಾರಿಗಳನ್ನು ಸ್ವತ್ತಿನ ಪಟ್ಟಿಯಲ್ಲಿ ನಮೂದಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಪ್ರಕರಣದ ಕಡತವನ್ನು ಮುಂದಿನ ತನಿಖೆಗೆ ಚಾಸಾ–13 ರವರಿಗೆ ಮುಂದಿನ ತನಿಖೆ ನೀಡಿರುತ್ತೇನೆ.

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತಿ. ನರಸೀಪುರ**